# ಕನ್ನಡ ರಂಗಭೂಮಿ ಪರಂಪರೆ ಮತ್ತು ಆಧುನಿಕತೆ

**ಜ್ಯೋತಿಪ್ರಿಯಾ***

**DOI: https://doi.org/10.5281/zenodo.22107372**

**ABSTRACT**

ಕನ್ನಡ ರಂಗಭೂಮಿ ಕರ್ನಾಟಕದ ಸಾಂಸ್ಕೃತಿಕ ಪರಂಪರೆಯ ಒಂದು ಭಾಗ. ಕನ್ನಡ ನಾಡಿನ ಜನಪದ ಕಲೆಗಳು, ಯಕ್ಷಗಾನ, ಬಯಲಾಟ, ದೊಡ್ಡಾಟ, ಸಣ್ಣಾಟ, ತಾಳಮದ್ದಲೆ ಮುಂತಾದ ಕಲಾ ಪ್ರಕಾರಗಳು ಕನ್ನಡ ರಂಗಭೂಮಿಯ ಬೆಳವಣಿಗೆಗೆ ಭದ್ರವಾದ ಅಡಿಪಾಯವನ್ನು ನಿರ್ಮಿಸಿವೆ. ಕಾಲಕ್ರಮೇಣ ಪಾಶ್ಚಾತ್ಯ ರಂಗಭೂಮಿಯ ಪ್ರಭಾವ, ಹೊಸ ತಂತ್ರಜ್ಞಾನ, ಹೊಸ ನಾಟಕಕಾರರು ಮತ್ತು ನಿರ್ದೇಶಕರ ಪ್ರಯೋಗಗಳಿಂದ ಕನ್ನಡ ರಂಗಭೂಮಿಯ ಆಧುನಿಕ ರೂಪವನ್ನು ಪಡೆದುಕೊಂಡಿದೆ. 19ನೆಯ ಶತಮಾನದ ಕೊನೆಯ ಸುಮಾರಿಗೆ ಆಧುನಿಕ ಕನ್ನಡ ರಂಗಭೂಮಿ ಅಸ್ತಿತ್ವದಲ್ಲಿ ಬಂದರೂ ಕನ್ನಡದಲ್ಲಿ ನಾಟಕ ಸಾಹಿತ್ಯ ರಚನೆಯಾಗಿರಲಿಲ್ಲ. ಕನ್ನಡದ ಆರಂಭಕಾಲದ ನಾಟಕಗಳು ಇತರ ಭಾಷೆಗಳ ಹಾಗೂ ಕಂಪನಿಗಳ ಅನುವಾದಿತ ನಾಟಕಗಳಾಗಿದ್ದವು. ಜಾನಪದ ಪರಂಪರೆಗೆ ಅನುಗುಣವಾಗಿ ಪುರಾಣದ ವಸ್ತುಗಳನ್ನು ಒಳಗೊಂಡ ನಾಟಕಗಳು ರಚಿತವಾದವು. ಸಂಸ್ಕೃತ ಭಾಷೆಯ ಕಾಳಿದಾಸ, ಭವಭೂತಿ, ಭಟ್ಟನಾರಾಯಣ ಮೊದಲಾದ ನಾಟಕಕಾರರ ಕೃತಿಗಳು ಕನ್ನಡಕ್ಕೆ ಅನುವಾದಗೊಂಡವು. ಮೈಸೂರಿನಲ್ಲಿ ರಾಜರ ಪ್ರೋತ್ಸಾಹದಿಂದ ಸಂಸ್ಕೃತ ನಾಟಕಗಳ ಅನುವಾದದ ಜೊತೆಗೆ, ರಂಗಭೂಮಿಯ ಪ್ರದರ್ಶನಗಳು ಪ್ರಾರಂಭಗೊಂಡವು. ಸಂಸ್ಕೃತ ನಾಟಕಗಳ ಅನುವಾದಗಳಿಂದ ಆಧುನಿಕ ನಾಟಕ ಸಾಹಿತ್ಯವು ಪ್ರಾರಂಭವಾಯಿತು. ಸಂಸ್ಕೃತದ 'ಶಾಕುಂತಲ' ಮತ್ತು 'ರತ್ನಾವಳಿ' ನಾಟಕಗಳು ಕನ್ನಡಕ್ಕೆ ಅನುವಾದಗೊಂಡವು. ಚುರಮರಿ ಶೇಷಗಿರಿರಾಯರು 'ಶಾಕುಂತಲ' ನಾಟಕವನ್ನು, ಬಸವಪ್ಪ ಶಾಸ್ತ್ರಿಗಳು 'ಶಾಕುಂತಲ' ಹಾಗೂ 'ರತ್ನಾವಳಿ' ನಾಟಕವನ್ನು ಕನ್ನಡಕ್ಕೆ ಭಾಷಾಂತರಿಸಿದರು. ಇವು ರಂಗದ ಮೇಲೆ ಪ್ರದರ್ಶನವನ್ನು ಕಂಡವು. ಇದು ಕನ್ನಡ ರಂಗಭೂಮಿಯ ಇತಿಹಾಸದಲ್ಲಿ ಒಂದು ಮಹತ್ವದ ಹೆಜ್ಜೆಯಾಯಿತು. ನಂತರ ವೃತ್ತಿ ನಾಟಕ ಕಂಪನಿಗಳು ಪ್ರಾರಂಭಗೊಂಡವು. ಪೌರಾಣಿಕ ನಾಟಕಗಳು, ಸಾಮಾಜಿಕ ನಾಟಕಗಳು ರಂಗಭೂಮಿಯನ್ನು ಪ್ರವೇಶಿಸಿದವು. ವಿವಿಧ ನಾಟಕ ಕಂಪನಿಗಳು ರಂಗಭೂಮಿಯಲ್ಲಿ ಮಹತ್ವದ ಪಾತ್ರವನ್ನು ಬೀರಿದವು. ಆಧುನಿಕ ಸಂದರ್ಭದಲ್ಲಿ ವೃತ್ತಿ ರಂಗಭೂಮಿಯು ನಾಟಕಗಳ ಪ್ರದರ್ಶನದಲ್ಲಿ ಅನೇಕ ಮಾರ್ಪಾಡುಗಳನ್ನು ತಂದಿತು. ಹವ್ಯಾಸಿ ರಂಗಭೂಮಿಯು ರಂಗಭೂಮಿಗೆ ಆಧುನಿಕತೆಯ

* **ಡಾ. ಜ್ಯೋತಿಪ್ರಿಯಾ,** ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ, ಡಾ. ಪಿ. ದಯಾನಂದ ಪೈ – ಪಿ. ಸತೀಶ ಪೈ ಸರಕಾರಿ ಪ್ರಥಮದರ್ಜೆ ಕಾಲೇಜು, ರಥಬೀದಿ, ಮಂಗಳೂರು.

ಸ್ಪರ್ಶವನ್ನು ನೀಡಿತು. ಹೊಸ ತಂತ್ರಜ್ಞಾನ, ನಿರ್ದೇಶನದ ತಂತ್ರಗಾರಿಕೆ, ವಿನೂತನ ಶೈಲಿ, ಸಂವಹನ ಮಾಧ್ಯಮಗಳ ಬಳಕೆ ಇಂದು ರಂಗಭೂಮಿಯಲ್ಲಿ ಅನೇಕ ಮಾರ್ಪಾಡುಗಳನ್ನು ತಂದಿದೆ. ಪಾಶ್ಚಾತ್ಯ ರಂಗಭೂಮಿಯ ಪ್ರಭಾವ ಬಹಳ ಮಟ್ಟಿಗೆ ನಾಟಕ ಪ್ರದರ್ಶನದ ಜೊತೆಗೆ ರಂಗಭೂಮಿಯಲ್ಲಿ ಹೊಸ ಹೆಜ್ಜೆಯನ್ನು ಇಡುತ್ತಾ ಮುಂದೆ ಸಾಗಿದೆ.

**KEYWORDS:** ರಂಗಭೂಮಿ, ಪರಂಪರೆ, ಆಧುನಿಕತೆ, ನಾಟಕಗಳು.

**ಪ್ರವೇಶಿಕೆ:**

ರಂಗಭೂಮಿಯು ಸಾಹಿತ್ಯ, ಸಂಗೀತ ಅಭಿನಯಗಳನ್ನು ಒಳಗೊಂಡು, ಹೊಸತನವನ್ನು ಮೈಗೂಡಿಸಿಕೊಳ್ಳುತ್ತಾ, ಏಳು-ಬೀಳುಗಳನ್ನು ಕಾಣುತ್ತಾ, ಜನಸಾಮಾನ್ಯರ ಜೀವವಾಹಿನಿಯಾಗಿ, ಸಾಂಸ್ಕೃತಿಕ ನೆಲೆಯಾಗಿ ಕನ್ನಡನಾಡಿನಲ್ಲಿ ಬೆಳೆದುಬಂದಿದೆ. ಇದು ಕಲಾಸೃಷ್ಟಿ. ರಂಗಭೂಮಿಯು ನಾಟಕ ಪ್ರದರ್ಶನಕ್ಕೆ ಒಂದು ಮೂರ್ತ ಸ್ವರೂಪವನ್ನು ತಂದುಕೊಡುವ ಸಾಧನ ಮಾತ್ರವಲ್ಲ, ಅದು ನಾಟಕ ಪ್ರಯೋಗದ ಅರ್ಥದಲ್ಲಿ ರಸಾವಿಷ್ಕಾರದ ಒಂದು ವಿದ್ಯುಕ್ತ ಕ್ರಿಯೆ. ರಂಗಭೂಮಿಯು ದೃಶ್ಯ ಹಾಗೂ ಶ್ರಾವ್ಯ ಮಾಧ್ಯಮವನ್ನು ಒಳಗೊಂಡು ಸುದೀರ್ಘಕಾಲದ ಸಮೃದ್ಧ ಪರಂಪರೆಯನ್ನು ವ್ಯಕ್ತಪಡಿಸುತ್ತಾ ಸಂದರ್ಭಕ್ಕೆ ತಕ್ಕಂತೆ ಹೊಸ ಹೊಸ ರೂಪ ವಿನ್ಯಾಸಗಳನ್ನು ಪಡೆದುಕೊಳ್ಳುತ್ತಾ ತನ್ನ ಅಸ್ತಿತ್ವದ ಬೇರನ್ನು ಭದ್ರವಾಗಿ ನೆಲೆಗೊಳಿಸಿ ಸಾಗಿ ಬಂದಿರುವುದನ್ನು ಕಾಣಬಹುದು.

**ಕನ್ನಡ ರಂಗಭೂಮಿಯ ಪರಂಪರೆ:**

ಕನ್ನಡ ನಾಡಿನಲ್ಲಿ ಜಾನಪದ ಕಲೆಗಳಾದ ತಾಳಮದ್ದಲೆ, ಸಣ್ಣಾಟ, ದೊಡ್ಡಾಟ, ಕಂಸಾಳೆ ಹೀಗೆ ವಿವಿಧ ಕಲಾಪ್ರಕಾರಗಳು ಕೇವಲ ಕಥನ ಕಲೆಗಳು ಮಾತ್ರ ಆಗಿರದೆ, ಅವು ಪ್ರದರ್ಶನ ಕಲೆಗಳೂ ಆಗಿ ಪ್ರಾಚೀನ ರಂಗಭೂಮಿಗೆ ಪ್ರೇರಣೆಯನ್ನು ನೀಡಿದವು. ಸಂಸ್ಕೃತ ನಾಟಕಗಳು ಕನ್ನಡದಲ್ಲಿ ನಾಟಕಗಳು ರಚನೆಗೊಳ್ಳುವುದಕ್ಕೆ ಪ್ರೇರಣೆಯನ್ನು ಪಡೆದವು. ಕನ್ನಡದಲ್ಲಿ ನಾಟಕ ಸಾಹಿತ್ಯ ರಚನೆಗೊಂಡಿದ್ದು ಹದಿನೇಳನೆಯ ಶತಮಾನದಲ್ಲಿ. ಮೈಸೂರಿನ ರಾಜ ಚಿಕ್ಕದೇವರಾಯನ ಆಸ್ಥಾನದಲ್ಲಿದ್ದ ಸಿಂಗರಾರ್ಯನು ಬರೆದ 'ಮಿತ್ರವಿಂದಾ ಗೋವಿಂದ' (1680) ಕನ್ನಡದ ಮೊತ್ತಮೊದಲ ಲಭ್ಯವಿರುವ ನಾಟಕ. ಇದು ಸಂಸ್ಕೃತದ ರಾಜ ಹರ್ಷನ 'ರತ್ನಾವಳಿ' ನಾಟಕದ ರೂಪಾಂತರ. ಆನಂತರ ಎರಡು ಶತಮಾನಗಳವರೆಗೆ ಕನ್ನಡದಲ್ಲಿ ಸ್ವತಂತ್ರ ನಾಟಕ ಸಾಹಿತ್ಯವು ರಚನೆಯಾಗಲಿಲ್ಲ.

ಹತ್ತೊಂಬತ್ತನೆಯ ಶತಮಾನದ ಕೊನೆಗೆ ಆಧುನಿಕ ಕನ್ನಡ ರಂಗಭೂಮಿ ಅಸ್ತಿತ್ವದಲ್ಲಿ ಬಂದಿತು. ಆದರೆ ನಾಟಕ ಸಾಹಿತ್ಯವು ರಚನೆಯಾಗಿರಲಿಲ್ಲ. ಪಾರ್ಸಿ ಕಂಪೆನಿಯ ಅನುವಾದಿತ ನಾಟಕಗಳು ಕನ್ನಡದಲ್ಲಿ ಬಂದವು. ನಂತರ ಮೈಸೂರು ಅರಸರ ಪ್ರೋತ್ಸಾಹದಿಂದ ಸಂಸ್ಕೃತ ನಾಟಕಗಳ ಅನುವಾದಗಳು ಕನ್ನಡದಲ್ಲಿ ರಂಗಭೂಮಿಗೆ ಬಂದು ಅವುಗಳ ಪ್ರದರ್ಶನಗಳು ಪ್ರಾರಂಭವಾಯಿತು. ಚುರಮರಿ ಶೇಷಗಿರಿರಾಯರು ಕಾಳಿದಾಸನ 'ಶಾಕುಂತಲ' ನಾಟಕವನ್ನು ಕನ್ನಡಕ್ಕೆ ಅನುವಾದಿಸಿದರು. ನಂತರ ರಂಗಭೂಮಿಯ ಪ್ರದರ್ಶನಕ್ಕೆಂದೇ ಬಸವಪ್ಪ ಶಾಸ್ತ್ರಿಗಳ 'ಶಾಕುಂತಲ' ಹಾಗೂ 'ರತ್ನಾವಳಿ' ನಾಟಕಗಳು ಅನುವಾದಗೊಂಡವು.

**ವೃತ್ತಿ ರಂಗಭೂಮಿ:**

ಶ್ರೀರಂಗರು ತಮ್ಮ 'ಕನ್ನಡ ರಂಗಭೂಮಿ ನಡೆದು ಬಂದ ದಾರಿ' ಕೃತಿಯಲ್ಲಿ ಹೀಗೆ

ಹೇಳುತ್ತಾರೆ "ಕನ್ನಡ ವ್ಯವಸಾಯ ರಂಗಭೂಮಿಯು 1846ರಲ್ಲಿ ಸಾಂಗಲಿ ರಾಜನು ಕನ್ನಡ ದಶಾವತಾರವನ್ನು ಮೆಚ್ಚಿ, ಮರಾಠೀ ಸಂಗೀತ ನಾಟಕವನ್ನು, ಕನ್ನಡದ ಮಾದರಿಯ ಮೇಲೆಯೇ, ಅಸ್ತಿತ್ವದಲ್ಲಿ ತರಲು ಉತ್ಸಾಹಿತನಾದನು. ಹೀಗೆ ಆಧುನಿಕ ಮರಾಠಿ ಕಂಪನಿಗಳು ಆರಂಭವಾದವು. ಮುಂದೆ ಇಪ್ಪತ್ತು, ಮೂವತ್ತು ವರ್ಷಗಳವರೆಗೆ ಕರ್ನಾಟಕದಲ್ಲಿ ಮರಾಠಿ ನಾಟಕ ಕಂಪನಿಗಳು ಕನ್ನಡ ಪ್ರೇಕ್ಷಕರನ್ನು ಆಕರ್ಷಿಸಿತು. ಆಗ ಬಾಳಾಚಾರ್ಯ ಸಕ್ಕರಿ (ಶಾಂತಕವಿ) ತಮ್ಮ ಭಾಷಾಭಿಮಾನದಿಂದ ಇದನ್ನು ಪ್ರತಿಭಟಿಸಿ, ಕನ್ನಡದಲ್ಲಿ ಸ್ವತಂತ್ರ ನಾಟಕಗಳನ್ನು ಬರೆದರು. ಮಾತ್ರವಲ್ಲದೆ ಒಂದು ನಾಟಕ ಮಂಡಳಿಯನ್ನು ಸ್ಥಾಪಿಸಿದರು. ಗದಗದಲ್ಲಿ ತಮ್ಮ ಚಟುವಟಿಕೆಗಳನ್ನು ಪ್ರಾರಂಭಿಸಿ, 'ವೀರನಾರಾಯಣ ಪ್ರಸಾದಿತ ಕೃತಪುರ ನಾಟಕಮಂಡಳಿ'ಯನ್ನು ಕಟ್ಟಿ, 1877ರಲ್ಲಿ ತಾವೇ ಬರೆದ 'ಉಷಾಹರಣ' ಎಂಬ ನಾಟಕವನ್ನು ಆಡಿಸಿದರು". (ಪುಟ–23) ಶ್ರೀರಂಗರು ಹೇಳುವಂತೆ ವೃತ್ತಿ ರಂಗಭೂಮಿಯು ನಿಜವಾಗಿ 'ವೃತ್ತಿ ರಂಗಭೂಮಿ'ಯಾಗಿರಲಿಲ್ಲ. ನಟ–ನಟಿಯರು ವೃತ್ತಿಗಾಗಿ ಯಾವ ಶಿಕ್ಷಣವನ್ನೂ ಪಡೆಯುತ್ತಿರಲಿಲ್ಲ. ನಟನು ಬಿಟ್ಟರೆ ಅಥವಾ ಮರಣಹೊಂದಿದರೆ ಮಂಡಳಿಯ ಅಸ್ತಿತ್ವವೇ ಇಲ್ಲದಂತಾಗುತ್ತಿತ್ತು. ಮಾಲಿಕನೊಬ್ಬ ಹಣವನ್ನು ತೊಡಗಿಸಿ, ಕಂಪನಿಯನ್ನು ಸ್ಥಾಪಿಸಿ ಲಾಭ ವ್ಯವಸಾಯದಲ್ಲಿ ತೊಡಗಿಕೊಳ್ಳುತ್ತಿದ್ದನು. ಆದ್ದರಿಂದಲೇ ಅದನ್ನು 'ವ್ಯವಸಾಯ ರಂಗಭೂಮಿ' ಎಂದು ಕರೆಯುತ್ತಿದ್ದರು.

ನಂತರ 'ತಂತುಪುರಸ್ಥ' ಮಂಡಳಿ, 'ಭರತಕಲೋತ್ತೇಜಕ ಸಂಗೀತ ಸಮಾಜ', 'ಹಲಸಗಿ ಮಂಡಳಿ'ಗಳು ಸ್ಥಾಪಿತಗೊಂಡವು. ಇವೆಲ್ಲವೂ ಪೌರಾಣಿಕ ನಾಟಕಗಳನ್ನು ಆಡಿಸುತ್ತಿದ್ದವು. 1901ರಲ್ಲಿ 'ಕೊಣ್ಣೂರ ಕಾಡಸಿದ್ದೇಶ್ವರ ಸಂಗೀತ ನಾಟಕ ಮಂಡಳಿ' ಹಾಗೂ 'ಶ್ರೀ ಮಹಾಲಕ್ಷ್ಮೀ ಪ್ರಸಾದಿತ ನಾಟಕ ಮಂಡಳಿ' (ಶಿರಹಟ್ಟಿ ಕಂಪನಿ) ಸ್ಥಾಪನೆಗೊಂಡವು. ಆಗ ಪ್ರೇಕ್ಷಕರನ್ನು ಆಕರ್ಷಿಸುವ ದೃಷ್ಟಿಯಿಂದ ಅನೇಕ ಬದಲಾವಣೆಗಳು ರಂಗದಲ್ಲಿ ಕಾಣಿಸಿಕೊಂಡವು. ಸ್ತ್ರೀ ಪಾತ್ರಗಳಿಗಾಗಿ ನಟಿಯರನ್ನು ರಂಗದ ಮೇಲೆ ತರಲಾಯಿತು. ವಿದ್ಯುದ್ದೀಪಗಳನ್ನು ಬಳಸಲಾಯಿತು. ವೇಷಭೂಷಣಗಳಲ್ಲಿ ಬದಲಾವಣೆ ಅನಿವಾರ್ಯವಾಯಿತು. ದೃಶ್ಯಗಳ ಬದಲಾವಣೆಯನ್ನು ರಂಗದ ಮೇಲೆ ತರಲಾಯಿತು. ಹೀಗೆ ಅನೇಕ ಬದಲಾವಣೆಗಳು ಕಾಣಿಸಿಕೊಂಡವು. ಮುಂದೆ 'ಯುವತೀವಿಜಯ' ಎಂಬ ಸಾಮಾಜಿಕ ನಾಟಕವನ್ನು, 'ಭೋಜಪ್ರಬಂಧ' ಎಂಬ ಕಾಳಿದಾಸ ಐತಿಹ್ಯವನ್ನು ಕುರಿತಾದ ನಾಟಕವನ್ನು ಯಶಸ್ವಿಯಾಗಿ ರಂಗಭೂಮಿಗೆ ತಂದರು. ನಂತರ ರಾಜಕೀಯ ಜಾಗೃತಿಯ ಪರಿಣಾಮವಾಗಿ ಈ ಕಂಪನಿಗಳು ಪ್ರಭಾವವನ್ನು ಕಳೆದುಕೊಂಡವು. 'ಚಾಮರಾಜೇಂದ್ರ ಕರ್ನಾಟಕ ನಾಟಕ ಸಭಾ' ವಿಸರ್ಜನೆಯಾದ ನಂತರ ಅಲ್ಲಿನ ನಟರೇ ಸೇರಿ ಮಂಡಳಿಯನ್ನು ಸ್ಥಾಪಿಸಿದರು. ಅದರ ಸ್ಥಾಪಕರು ಎನ್. ಸುಬ್ಬಣ್ಣ. 1919ರಲ್ಲಿ ಪ್ರಾರಂಭವಾದ ಈ ಸಂಸ್ಥೆ ಮುಂದೆ ಅಭಿವೃದ್ಧಿಯನ್ನು ಹೊಂದಿತು. ಕನ್ನಡ ರಂಗಭೂಮಿಯ ಹಿರಿಯ ನಟರಲ್ಲಿ ಅಗ್ರಗಣ್ಯರಾದ ಮಂಡ್ಯ ರಂಗಾಚಾರ್ಯ ಮತ್ತು ಗೆಳೆಯರು 'ರಾಜಧಾನಿ ನಾಟಕ ಮಂಡಳಿ' ಮೈಸೂರು ಸ್ಥಾಪಿಸಿದರು. 1902ರಲ್ಲಿ ವರದಾಚಾರ್ಯರು 'ರತ್ನಾವಳಿ ನಾಟಕ ಸಭಾ' ಸ್ಥಾಪಿಸಿದರು. ವರದಾಚಾರ್ಯರು ರಂಗಭೂಮಿಯಲ್ಲಿ ಪ್ರಸಿದ್ಧ ನಟರು ಮಾತ್ರವಲ್ಲ ನಾಟಕಕಾರರೂ ಆಗಿದ್ದರು. 'ನಾಟಕ ಶಿರೋಮಣಿ' ಎಂಬ ಬಿರುದು ಅವರ ಅಭಿನಯಕ್ಕೆ ಸಂದ ಗೌರವ. ವೃತ್ತಿ ರಂಗಭೂಮಿಯಲ್ಲಿ ಅಭಿನಯ ಮತ್ತು ಸಂಗೀತಗಳಿಗೆ ಸಿಕ್ಕಿದ ಮಹತ್ವ ಮತ್ತು ಗೌರವಗಳು ಅಂದಿನ ಪ್ರೇಕ್ಷಕರಂತೆ ವರದಾಚಾರ್ಯರಂತಹ ಪ್ರತಿಭಾವಂತ ನಟರೂ ಕಾರಣರಾದರು. ಹೀಗೆ ರಂಗಭೂಮಿಯಲ್ಲಿ ನಾಟಕಕ್ಕಿಂತ ನಟನಿಗೆ, ನಟನಿಗಿಂತ ಸಂಗೀತಕ್ಕೆ

ಮತ್ತು ಭಾವಾತಿರೇಕ ಪ್ರದರ್ಶನಗಳಿಗೆ ಹೆಚ್ಚು ಮಹತ್ವ ಬರಲು ಪರೋಕ್ಷವಾಗಿ ಇವರು ಕಾರಣರಾದರು.

1884ರಲ್ಲಿ ತುಮಕೂರಿನ ಗುಬ್ಬಿಯ ಕಲಾಭಿಮಾನಿಗಳು ನಾಟಕ ಸಂಘವನ್ನು ಆರಂಭಿಸಿ, 'ಕುಮಾರ ರಾಮನ ಕಥೆ'ಯನ್ನು ಯಕ್ಷಗಾನ ರೂಪದಲ್ಲಿ ಪ್ರದರ್ಶಿಸಿದರು. ಅದನ್ನು ಜಯಚಾಮರಾಜೇಂದ್ರ ಒಡೆಯರು ನೋಡಿ ಮೆಚ್ಚಿಕೊಂಡರು. ಇದರಿಂದ ಉತ್ತೇಜಿತರಾಗಿ ಅನೇಕ ಯಶಸ್ವಿ ನಾಟಕಗಳನ್ನು ನೀಡಿದರು. ಗುಬ್ಬಿಯ ಚಂದ್ರಣ್ಣ, ಅಜೀಜ್ ಸಾಹೇಬ್ ಮತ್ತು ನೀಲಕಂಠಪ್ಪನವರ ನೇತೃತ್ವದಲ್ಲಿ ಆರಂಭವಾದ ಈ ಕಂಪನಿಗೆ ಮುಂದೆ ಗುಬ್ಬಿ ಚಂದ್ರಣ್ಣನವರೇ ಮಾಲಿಕರಾದರು. ಕನ್ನಡ ವೃತ್ತಿರಂಗಭೂಮಿಯಲ್ಲಿ ಹೆಸರಾದ ಗುಬ್ಬಿ ವೀರಣ್ಣನವರು ಈ ಕಂಪನಿಯನ್ನು 1896ರಲ್ಲಿ ಸೇರಿದರು. 1917ರಲ್ಲಿ ಚಂದ್ರಣ್ಣನವರು ನಿಧನರಾದ ನಂತರ 1920ರಲ್ಲಿ ಅದರ ಪೂರ್ಣ ಮಾಲಿಕತ್ವವನ್ನು ವಹಿಸಿದರು. ಮುಂದೆ ಮೂರು ದಶಕಗಳ ಕಾಲ ಕನ್ನಡ ರಂಗಭೂಮಿಯ ಕೇಂದ್ರವ್ಯಕ್ತಿಯಾಗಿ, ಅದ್ವಿತೀಯ ನಟನಾಗಿ ಮೆರೆದರು.

1874ರಲ್ಲಿ 'ಹಲಸಗಿ ನಾಟಕ ಮಂಡಳಿ' ಸ್ಥಾಪಿತವಾಯಿತು. 1895ರಲ್ಲಿ 'ಶ್ರೀಕಂಠೇಶ್ವರ ಕರ್ನಾಟಕ ನಾಟಕ ಸಭಾ' ಸ್ಥಾಪಿತವಾಯಿತು. 1916ರಲ್ಲಿ ಗರುಡ ಸದಾಶಿವ ರಾಯರು 'ದತ್ತಾತ್ರೇಯ ಸಂಗೀತ ನಾಟಕ ಮಂಡಳಿ'ಯನ್ನು ಸ್ಥಾಪಿಸಿದರು. ದೇಶಾಭಿಮಾನ ಜಾಗೃತಿಯ ಕುರಿತಾದ 'ಎಚ್ಚಮ್ಮ ನಾಯಕ' ನಾಟಕವನ್ನು ರಂಗಭೂಮಿಗೆ ತಂದರು. 'ಕಬೀರ್ ದಾಸ್' ಹಾಗೂ 'ವಿಷಮ ವಿವಾಹ' ಸಾಮಾಜಿಕ ನಾಟಕವನ್ನಾಡಿದರು. 'ಪಾದುಕಾ ಪಟ್ಟಾಭಿಷೇಕ', 'ಕೃಷ್ಣಲೀಲೆ', 'ಕಂಸವಧೆ' ಮುಂತಾದ ಪೌರಾಣಿಕ ನಾಟಕವನ್ನು ರಂಗಭೂಮಿಗೆ ತಂದರು. ಸುಮಾರು ನಲವತ್ತೈದು–ಐವತ್ತು ವರ್ಷಗಳವರೆಗೆ ಕಂಪನಿಯು ಅಸ್ತಿತ್ವದಲ್ಲಿತ್ತು. ನಂತರ ಅದರ ಜನಪ್ರಿಯತೆ ಕಡಿಮೆಯಾಯಿತು. 1954ರಲ್ಲಿ ಅವರ ಮರಣಾನಂತರ ಅದು ಕೊನೆಯಾಯಿತು. ವೃತ್ತಿ ರಂಗಭೂಮಿಯಲ್ಲಿ ಪೌರಾಣಿಕ ವಸ್ತುವಿಗೆ ಮಹತ್ವ ದೊರೆತ ಕಾರಣದಿಂದ ಸಹಜವಾಗಿಯೇ ಅದ್ಭುತವಾದ ದೃಶ್ಯ ವೈಭವಕ್ಕೆ ಕಾರಣವಾಯಿತು. ಕಣ್ಮನಗಳನ್ನು ಸೆಳೆಯುವ ದೃಶ್ಯಗಳು, ಅದಕ್ಕೆ ಸಮನಾದ ಸ್ತ್ರೀಪುರುಷ ವೇಷಭೂಷಣಗಳು ಜನರನ್ನು ಆಕರ್ಷಿಸಿದವು. ದೃಶ್ಯಗಳು ಹಾಗೂ ದೃಶ್ಯಕ್ಕೆ ತಕ್ಕಂತೆ ಪರದೆಗಳು ಎಲ್ಲಾ ಕಂಪನಿಯ ನಾಟಕ ಪ್ರದರ್ಶನದಲ್ಲಿ ಇರುತ್ತಿದ್ದವು (ಕನ್ನಡ ವೃತ್ತಿ ರಂಗಭೂಮಿ– ಪು.65). ಎಲ್ಲಾ ವರ್ಗದ ಜನರೂ ಪ್ರೇಕ್ಷಕರಾಗಿದ್ದರು.

**ಹವ್ಯಾಸಿ ರಂಗಭೂಮಿ:**

ಇಂಗ್ಲಿಷ್ ವಿದ್ಯಾಭ್ಯಾಸದ ಪರಿಣಾಮವಾಗಿ ಎಚ್ಚೆತ್ತ ಮಧ್ಯಮವರ್ಗ, ತನ್ನ ಆಶೋತ್ತರಗಳನ್ನು ಪ್ರತಿಬಿಂಬಿಸಬಲ್ಲ ರಂಗಭೂಮಿಯೊಂದನ್ನು ಕಂಡುಕೊಳ್ಳಲು ನಡೆಸಿದ ಪ್ರಯತ್ನವೇ ಹವ್ಯಾಸಿ ರಂಗಭೂಮಿಯಾಗಿ ಫಲಿಸಿತು ಎನ್ನಬಹುದು. ಜೀವನೋಪಾಯಕ್ಕಾಗಿ ಆಶ್ರಯಿಸದೆ ಸಂತೋಷಕ್ಕಾಗಿ, ಹವ್ಯಾಸವಾಗಿ, ರಂಗಭೂಮಿಯನ್ನು ಆಶ್ರಯಿಸುವ ಜನಗಳಿಂದ ನಡೆಸಲ್ಪಡುವ ರಂಗ ಚಟುವಟಿಕೆಗಳೆಲ್ಲವನ್ನೂ ಹವ್ಯಾಸಿ ರಂಗಭೂಮಿಯ ವ್ಯಾಪ್ತಿಗೆ ಸೇರಿಸಬಹುದು (ಆಧುನಿಕ ಕನ್ನಡ ನಾಟಕ– ಪು.359).

ಧಾರವಾಡದಲ್ಲಿ 1905ರಲ್ಲಿ 'ಭಾರತ ಕಲೋತ್ತೇಜಕ ಸಂಗೀತ ಸಮಾಜ'ವು ಐತಿಹಾಸಿಕವಾಗಿ ಮೊದಲ ಹವ್ಯಾಸಿ ಮಂಡಳಿಯೆನ್ನುತ್ತಾರೆ. ಚುರಮರಿ ಶೇಷಗಿರಿರಾಯರ 'ಶಾಕುಂತಲ' ನಾಟಕವೇ ಇದರ ಮೊದಲ ಪ್ರಯೋಗ. 1909ರಲ್ಲಿ ಬೆಂಗಳೂರಿನಲ್ಲಿ

‘ಅಮೆಚೂರ್ ಡ್ರಮಾಟಿಕ್ ಅಸೋಸಿಯೇಷನ್’ ಕನ್ನಡ ಹವ್ಯಾಸಿ ರಂಗಭೂಮಿಯಲ್ಲಿ ಇತಿಹಾಸವನ್ನು ನಿರ್ಮಿಸಿದ ಮೊತ್ತಮೊದಲ ಸಂಸ್ಥೆ. ಬೆಂಗಳೂರಿನ ಮಧ್ಯಮವರ್ಗದ ತರುಣರು, ಮತ್ತಿತರರು ಸೇರಿ ಆರಂಭಗೊಂಡ ಈ ಮಂಡಳಿ ಸುಮಾರು ಮೂರು ದಶಕಗಳ ಕಾಲ ಚಟುವಟಿಕೆಯಿಂದ ಕಾರ್ಯನಿರ್ವಹಿಸಿತು. ರಂಗಭೂಮಿಯ ಸಲುವಾಗಿಯೇ ಕನ್ನಡದಲ್ಲಿ ‘ರಂಗಭೂಮಿ’ ಎಂಬ ಸಚಿತ್ರ ಮಾಸಪತ್ರಿಕೆಯನ್ನು ಆರಂಭಿಸಿತು. ಟಿ.ಪಿ.ಕೈಲಾಸಂ, ಕೆ.ಎಸ್.ವಾಸುದೇವರಾವ್ ಈ ನಟವೃಂದದಲ್ಲಿದ್ದರು. ಮೈಸೂರಿನ ‘ಸಾಹಿತ್ಯ ನಾಟಕ ಸಂಘ’ (1919) ದಕ್ಷಿಣ ಕರ್ನಾಟಕದ ಮೊದಲ ಹವ್ಯಾಸಿ ಮಂಡಳಿಗಳಲ್ಲಿ ಪ್ರಮುಖವಾದದ್ದು. ಡಿ. ಲಕ್ಷ್ಮಮಯ್ಯನವರಿಂದ ಆರಂಭಗೊಂಡು, ಸಿ. ಆರ್. ಸುಬ್ಬರಾವ್, ಸಿ. ಆನಂದರಾವ್, ಎಂ.ಎಸ್ ನಂಜಪ್ಪ, ಡಿ ಕಪನಿಪತಿರಾವ್ ಮುಂತಾದವರಿಂದ ಬೆಳೆಸಲ್ಪಟ್ಟ ಈ ಮಂಡಳಿಯು ನಾಟಕ ಪ್ರದರ್ಶನ, ಸ್ಪರ್ಧೆ, ಉತ್ಸವಗಳನ್ನು ಏರ್ಪಡಿಸಿ ಹವ್ಯಾಸಿ ಚಟುವಟಿಕೆಗಳಿಗೆ ಉತ್ಸಾಹವನ್ನುಂಟುಮಾಡಿತು.

ಬಾಗಲಕೋಟೆಯ ‘ವಾಸುದೇವ ವಿನೋದಿನಿ ಸಭಾ’ (1927) ಎಂಬ ಹವ್ಯಾಸಿ ಮಂಡಳಿಯು ಕೆರೂರು ವಾಸುದೇವಾಚಾರ್ಯರ ನಾಟಕಗಳಿಗಾಗಿಯೇ ಹುಟ್ಟಿಕೊಂಡಿತು. ಧಾರವಾಡದಲ್ಲಿ ಶ್ರೀರಂಗರು ಆರಂಭಿಸಿದ ‘ಕನ್ನಡ ನಾಟ್ಯ ವಿಲಾಸಿ ಸಂಘ’ವು ಆಧುನಿಕ ಹವ್ಯಾಸಿ ರಂಗಭೂಮಿಯ ಇತಿಹಾಸದಲ್ಲಿ ಪ್ರಮುಖವಾದದ್ದು. ಶ್ರೀರಂಗ, ಗಿರೀಶ್ ಕಾರ್ನಾಡ್, ಲಂಕೇಶ್, ಚಂದ್ರಶೇಖರ ಕಂಬಾರ, ಚಂದ್ರಶೇಖರ ಪಾಟೀಲ ಮೊದಲಾದವರ ನಾಟಕಗಳು ಈ ರಂಗಭೂಮಿಯ ಮುಂಚೂಣಿಯಲ್ಲಿದ್ದವು. ಕೆ.ವಿ.ಸುಬ್ಬಣ್ಣನವರ ಹೆಗ್ಗೋಡಿನ ‘ನೀಲಕಂಠೇಶ್ವರ ನಾಟ್ಯ ಸೇವಾ ಸಂಘ’ ಪ್ರಾಯೋಗಿಕ ನಾಟಕ ಚಳುವಳಿಗೆ ಪ್ರೋತ್ಸಾಹ ಕೊಟ್ಟ ಮಂಡಳಿಗಳು.

ಕನ್ನಡ ಪ್ರಾಯೋಗಿಕ ರಂಗಭೂಮಿಯ ಅಭ್ಯುದಯಕ್ಕೆ ಕಾರಣರಾದವರಲ್ಲಿ ಬಿ.ವಿ. ಕಾರಂತರು ಪ್ರಮುಖರು. ನೂತನ ಸಂಪ್ರದಾಯ ಮತ್ತು ರಂಗತಂತ್ರವನ್ನು ಕಾರಂತರು ನಾಟಕಗಳ ಪ್ರಯೋಗಗಳಲ್ಲಿ ಬಳಸಿದರು. ನೂರಕ್ಕೂ ಹೆಚ್ಚು ನಾಟಕಗಳನ್ನು ನಿರ್ದೇಶಿಸಿದರು. ‘ಹಯವದನ’, ‘ಕತ್ತಲೆಬೆಳಕು’, ‘ಸತ್ತವರ ನೆರಳು’, ‘ದೊರೆ ಈಡಿಪಸ್’, ‘ಸಂಕ್ರಾಂತಿ’, ‘ಜೋಕುಮಾರಸ್ವಾಮಿ’, ‘ಗೋಕುಲನಿರ್ಗಮನ’– ಅದ್ಭುತ ಯಶಸ್ಸನ್ನು ಪಡೆಯಿತು. ಬಿ. ವಿ.ಕಾರಂತರ ‘ಬಯಲು ರಂಗಭೂಮಿ’ಯ ಪರಿಕಲ್ಪನೆ ಕನ್ನಡ ರಂಗಭೂಮಿಯ ಇತಿಹಾಸದಲ್ಲಿ ಮಹತ್ವದ ಘಟ್ಟ. ಅಖಿಲ ಭಾರತ ಮಟ್ಟದಲ್ಲಿ ಮನ್ನಣೆ ಪಡೆದ ಕೆಲವೇ ಪ್ರತಿಭಾವಂತ ನಿರ್ದೇಶಕರಲ್ಲಿ ಬಿ.ವಿ. ಕಾರಂತರ ಹೆಸರು ಅಗ್ರಪಂಕ್ತಿಯಲ್ಲಿದೆ.

**ಆಧುನಿಕತೆ:**

ಕನ್ನಡ ಹವ್ಯಾಸಿ ರಂಗಭೂಮಿಯಲ್ಲಿ ಬೀದಿ ನಾಟಕಗಳು ಕಾಣಿಸಿಕೊಂಡವು. ನಾಟಕ ಪ್ರದರ್ಶನಕ್ಕೆ ಬೇರೆ ಕಡೆಗೆ ಹೋಗದೆ, ಪ್ರೇಕ್ಷಕರಿದ್ದಲ್ಲಿಯೇ ನಾಟಕವನ್ನು ಆಡುವುದು ಬೀದಿ ನಾಟಕದ ವಿಶೇಷತೆ. ವೃತ್ತಿ ರಂಗಭೂಮಿಯಿಂದ ಹವ್ಯಾಸಿ ರಂಗಭೂಮಿಯ ಕಡೆಗೆ ಪರಿವರ್ತನೆಗೊಂಡ ರಂಗಭೂಮಿ ಆಧುನಿಕತೆಯ ಸ್ಪರ್ಶವನ್ನು ಪಡೆಯಿತು. ಬೀದಿನಾಟಕಗಳು ಜ್ವಲಂತ ಸಮಕಾಲೀನ ಸಮಸ್ಯೆಗಳನ್ನು, ನಡೆದ ಘಟನೆಗಳನ್ನು ಆಧರಿಸಿ ನಾಟಕವನ್ನಾಗಿಸಿತು. ಇದು ಜನಜೀವನದ ಕಡೆಗೆ ವ್ಯಾಪಿಸಿತು. ರಂಗಭೂಮಿಯ ಮಾಧ್ಯಮವನ್ನು ಬಳಸಿಕೊಂಡು ಜನರನ್ನು ಎಚ್ಚರಿಸುವ, ಅನ್ಯಾಯಗಳ ವಿರುದ್ಧ ಬಂಡಾಯ ಏಳುವ ಕಾರ್ಯವನ್ನು ಯಶಸ್ವಿಯಾಗಿ ಮಾಡುವ ಸಾಧ್ಯತೆಯನ್ನು ಬೀದಿನಾಟಕಗಳು ತೋರಿಸಿ ಕೊಟ್ಟಿವೆ.

ಆಧುನಿಕತೆಯ ಸ್ಪರ್ಶವನ್ನು ಪಡೆದ ರಂಗಭೂಮಿಯು ಭವ್ಯವಾದ ಸಲಕರಣೆಗಳು, ಸುಸಜ್ಜಿತ ರಂಗಮಂದಿರ, ಬೆಳಕಿನ ವಿನ್ಯಾಸದ ಚಾತುರ್ಯ, ವೇಷಭೂಷಣ ಮುಂತಾದ ಪರಿವರ್ತನೆಗಳೊಂದಿಗೆ ಪ್ರೇಕ್ಷಕರನ್ನು ತನ್ನತ್ತ ಹೆಚ್ಚಾಗಿ ಸೆಳೆಯತೊಡಗಿತು. ಅನ್ಯ ಭಾಷೆಯ ನಾಟಕಗಳನ್ನು ಹಿನ್ನೆಲೆಯಾಗಿರಿಸಿಕೊಂಡು ಕನ್ನಡದಲ್ಲಿ ಬೀದಿ ನಾಟಕಗಳು ವಿಶಿಷ್ಟ ರೀತಿಯಲ್ಲಿ ರೂಪುಗೊಂಡಿವೆ. 'ಉಳ್ಳವರ ನೆರಳು', 'ಧನ್ವಂತರಿಯ ಚಿಕಿತ್ಸೆ', 'ದಲಿತರು ಬರುವರು ದಾರಿ ಬಿಡಿ' ಪ್ರಮುಖ ಕೆಲವು ಬೀದಿ ನಾಟಕಗಳು. 'ಸಂಕ್ರಮಣ', 'ಸಾಕ್ಷಿ' ಮುಂತಾದ ಪ್ರಮುಖ ಪತ್ರಿಕೆಗಳು ಆಧುನಿಕ ಕನ್ನಡ ನಾಟಕದ ಬೆಳವಣಿಗೆಗೆ ಕಾರಣವಾದವು. ಆದರೆ ಆಧುನಿಕ ಕನ್ನಡ ನಾಟಕಕ್ಕೆ ವೃತ್ತಿ ರಂಗಭೂಮಿಯ ಆಶ್ರಯ ದೊರಕದೆ ಹೋದದ್ದು, ಕನ್ನಡ ರಂಗಭೂಮಿಯ ಬೆಳವಣಿಗೆಗೆ ದೊಡ್ಡ ನಷ್ಟವಾಯಿತು. ರಂಗಭೂಮಿಯ ಸಮಗ್ರ ಬೆಳವಣಿಗೆಗೆ ಜನತೆಯ ಪ್ರೋತ್ಸಾಹವೇ ಕಾರಣ. ಆದರೆ ವಿದ್ಯಾವಂತ ಪ್ರೇಕ್ಷಕರು ವೃತ್ತಿರಂಗಭೂಮಿಯನ್ನು ನಿರಾಕರಿಸಿದರೆ, ಕನ್ನಡ ರಂಗಭೂಮಿಯ ಬೆಳವಣಿಗೆ ಸಾಧ್ಯವಿಲ್ಲ.

ಆಧುನಿಕತೆಯು ಕನ್ನಡ ರಂಗಭೂಮಿಯಲ್ಲಿ ಹೊಸ ಹೊಸ ತಂತ್ರಜ್ಞಾನ, ತಂತ್ರ ಹಾಗೂ ನಾವೀನ್ಯತೆಯನ್ನು ತಂದುಕೊಟ್ಟಿತು. ಕಥಾವಸ್ತು, ಅಭಿನಯ, ನಿರ್ದೇಶನ, ರಂಗಸಜ್ಜಿಕೆ ಮತ್ತು ಬೆಳಕಿನ ವಿನ್ಯಾಸದಲ್ಲಿ ಹೊಸಪ್ರಯೋಗಗಳನ್ನು ಮಾಡಿತು. ಸಮಕಾಲೀನ ಸಮಸ್ಯೆಗಳು ನಾಟಕಗಳ ವಸ್ತುಗಳಾಗಿವೆ. ಇಂದು ಡಿಜಿಟಲ್ ತಂತ್ರಜ್ಞಾನಗಳನ್ನು ರಂಗಪ್ರದರ್ಶನಗಳಲ್ಲಿ ಬಳಸಲಾಗುತ್ತಿದೆ. ಪ್ರೇಕ್ಷಕರನ್ನು ಕೇವಲ ನೋಡುಗರನ್ನಾಗಿ ಇರಿಸದೆ, ಪ್ರದರ್ಶನದ ಅನುಭವದ ಭಾಗವಾಗಿಸುವ ಪ್ರಯತ್ನ ಕಂಡುಬರುತ್ತದೆ. ಹೊಸ ಹೊಸ ವಿಚಾರಧಾರೆಗಳು ಹಾಗೂ ವಿಭಿನ್ನ ಶೈಲಿಗಳನ್ನು ಪರಿಚಯಿಸುವ ಅನೇಕ ನಾಟಕಕಾರರು ಹಾಗೂ ನಿರ್ದೇಶಕರು ಆಧುನಿಕ ರಂಗಭೂಮಿಯನ್ನು ಶ್ರೀಮಂತಗೊಳಿಸಿದ್ದಾರೆ. ಜಾಗತಿಕ ರಂಗಭೂಮಿಯ ತಂತ್ರಗಳನ್ನು ಬಳಸಿಕೊಳ್ಳಲಾಗುತ್ತಿದೆ. ಕನ್ನಡ ಆಧುನಿಕ ರಂಗಭೂಮಿಯಲ್ಲಿ ಬಿ.ವಿ.ಕಾರಂತರು, ಗಿರೀಶ್ ಕಾರ್ನಾಡರು, ಚಂದ್ರಶೇಖರ ಕಂಬಾರರು ಮಹತ್ವದ ಕೊಡುಗೆಗಳನ್ನು ನೀಡಿದ್ದಾರೆ. ಆಧುನಿಕ ರಂಗತಂತ್ರಗಳನ್ನು ಸಂಯೋಜಿಸಿ ಹೊಸ ರೀತಿಯ ರಂಗಪ್ರಯೋಗಗಳನ್ನು ರೂಪಿಸಿದ್ದಾರೆ. ಬಿ.ವಿ.ಕಾರಂತರು ರಂಗಪ್ರಯೋಗದಲ್ಲಿ ನಾಟಕದ ಸಂದರ್ಭಕ್ಕೆ ತಕ್ಕಂತೆ ಹೊಸ ಸಂಗೀತವನ್ನು ಬಳಸಿದರು. ಯಕ್ಷಗಾನ, ಜನಪದ ಹಾಡು, ನೃತ್ಯ ಮತ್ತು ಸ್ಥಳೀಯ ಕಲಾಪ್ರಕಾರಗಳನ್ನು ಆಧುನಿಕ ರಂಗಭೂಮಿಯೊಂದಿಗೆ ಸಂಯೋಜಿಸಿದರು. ಇದರಿಂದ ರಂಗಭೂಮಿ ಜನಸಾಮಾನ್ಯರಿಗೆ ಹತ್ತಿರವಾಯಿತು. ರಂಗಸಜ್ಜಿಕೆಯಲ್ಲಿ ಪ್ರಯೋಗಗಳನ್ನು ತಂದರು. ಬೆಳಕು, ಬಣ್ಣ, ಪರದೆ, ವಸ್ತುಗಳು ಮತ್ತು ನಟರ ಚಲನೆಯನ್ನು ಪರಿಣಾಮಕಾರಿಯಾಗಿ ಬಳಸಿದರು. ಭಾವಾಭಿನಯಗಳ ಮೂಲಕ ಪಾತ್ರವನ್ನು ಕಟ್ಟಿಕೊಡುವ ಪ್ರಯತ್ನವನ್ನು ಮಾಡಿದರು. ಭಾರತೀಯ ಸಾಂಪ್ರದಾಯಿಕ ರಂಗಪರಂಪರೆಗಳ ಜೊತೆಗೆ ಪಾಶ್ಚಾತ್ಯ ರಂಗತಂತ್ರಗಳನ್ನು ಅಳವಡಿಸಿಕೊಂಡು ವಿಶಿಷ್ಟವಾದ ರಂಗಭಾಷೆಯನ್ನು ರೂಪಿಸಿದರು. ಪ್ರಸಿದ್ಧ ನಾಟಕಗಳ ನಿರ್ದೇಶನ ಮತ್ತು ರಂಗಪ್ರಯೋಗಗಳು ಆಧುನಿಕ ಕನ್ನಡ ರಂಗಭೂಮಿಗೆ ಒಂದು ಮಹತ್ವದ ಸ್ಥಾನವನ್ನು ಕಲ್ಪಿಸಿತು.

**ಸಮಾರೋಪ:**

ಕನ್ನಡ ರಂಗಭೂಮಿಯು ಸ್ವಾತಂತ್ರ್ಯ ಪೂರ್ವದಲ್ಲೇ ಅಸ್ತಿತ್ವದಲ್ಲಿದ್ದರೂ, ಅದು ಕನ್ನಡ ನಾಟಕ ಸಾಹಿತ್ಯದ ಉಗಮದೊಂದಿಗೆ ಹೆಚ್ಚು ಪ್ರಚಲಿತಕ್ಕೆ ಬಂತು. ಭಾರತೀಯ ಸಾಂಪ್ರದಾಯಿಕ ರಂಗಪರಂಪರೆಯೊಂದಿಗೆ ಆರಂಭಗೊಂಡ ಕನ್ನಡ ರಂಗಭೂಮಿ ನಾಟಕಗಳ ಯಶಸ್ವೀ ಪ್ರದರ್ಶನದೊಂದಿಗೆ ಅಭಿವೃದ್ಧಿಯನ್ನು ಹೊಂದಿತು. ವೃತ್ತಿ ರಂಗಭೂಮಿಯೊಂದಿಗೆ ಹವ್ಯಾಸಿ

ರಂಗಭೂಮಿಯು ಕನ್ನಡ ರಂಗಭೂಮಿಯನ್ನು ಪ್ರವೇಶಿಸಿ, ಅಕ್ಷರಸ್ಥ ಸಮುದಾಯವು ಈ ಹವ್ಯಾಸಿ ರಂಗಭೂಮಿಯನ್ನು ಹೆಚ್ಚಾಗಿ ಆಕರ್ಷಿಸಿತು. ಪೌರಾಣಿಕ ನಾಟಕಗಳ ಬದಲಿಗೆ ಸಮಕಾಲೀನ ಸಮಸ್ಯೆಗಳನ್ನು ವಸ್ತುವನ್ನಾಗಿಸಿಕೊಂಡ ನಾಟಕಗಳು ರಂಗಭೂಮಿಯನ್ನು ಪ್ರವೇಶಿಸಿದವು. ಆಧುನಿಕತೆಯ ಪ್ರವೇಶವು ರಂಗಪ್ರಯೋಗಗಳಲ್ಲಿ ಗಣನೀಯ ಬದಲಾವಣೆಯನ್ನು ತಂದಿತು. ರಂಗಸಜ್ಜಿಕೆ, ಬೆಳಕು, ವಸ್ತ್ರವಿನ್ಯಾಸ, ದೃಶ್ಯ ಹಾಗೂ ಶ್ರಾವ್ಯ ಮಾಧ್ಯಮಗಳಲ್ಲಿ ಬದಲಾವಣೆಗಳಾದವು. ಹೊಸರಂಗಪ್ರಯೋಗಗಳು, ನಿರ್ದೇಶನಗಳು ಕನ್ನಡ ರಂಗಭೂಮಿಯಲ್ಲಿ ಹೊಸ ಅಧ್ಯಾಯವನ್ನು ತೆರೆಯಿತು. ಬೀದಿನಾಟಕ, ಏಕಾಂಕನಾಟಕಗಳು ಕನ್ನಡದಲ್ಲಿ ಕಾಣಿಸಿಕೊಂಡು, ಇದು ಯುವಜನಾಂಗವನ್ನು ಹೆಚ್ಚಾಗಿ ಆಕರ್ಷಿಸುತ್ತಿದೆ.

ಪ್ರಸ್ತುತ ಕನ್ನಡ ರಂಗಭೂಮಿಯು ಇಂದು ಇತರ ಸಿನೇಮಾ ಹಾಗೂ ಇತರ ಸಾಮಾಜಿಕ ಮಾಧ್ಯಮಗಳ ಪರಿಣಾಮದಿಂದಾಗಿ ತನ್ನ ಅಸ್ತಿತ್ವವನ್ನು ಕಳೆದುಕೊಳ್ಳುವ ಸ್ಥಿತಿಯಲ್ಲಿದೆ. ಕನ್ನಡ ರಂಗಭೂಮಿಗೆ ಸರ್ಕಾರವು ವಿವಿಧ ಕಾರ್ಯಯೋಜನೆಗಳನ್ನು ರೂಪಿಸಿ, ಅದರ ಅಭಿವೃದ್ಧಿಗೆ ಶ್ರಮಿಸಬೇಕಾದ ಅನಿವಾರ್ಯತೆ ಇದೆ. ರಂಗಮಂದಿರಗಳ ನಿರ್ಮಾಣದ ಜೊತೆಗೆ ವೃತ್ತಿರಂಗಭೂಮಿಗೆ ಉತ್ತೇಜನಗಳನ್ನು ನೀಡಿ, ನಟರನ್ನು ಪ್ರೋತ್ಸಾಹಿಸಬೇಕು. ನಾಟಕ ಅಕಾಡೆಮಿಗಳಿಗೆ ಉತ್ತೇಜನ ನೀಡಬೇಕು. ಇದರಿಂದ ಕನ್ನಡ ರಂಗಭೂಮಿಯು ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳಲು ಸಾಧ್ಯ.

**ಪರಾಮರ್ಶನ ಗ್ರಂಥಗಳು:**


1. ಶ್ರೀರಂಗ, (1987), ಕನ್ನಡ ರಂಗಭೂಮಿ ನಡೆದುಬಂದ ದಾರಿ, ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತು.
2. ಪ್ರಭುದೇವ ಅ. ಗಂಜೀಹಾಳ, (2009), ಕನ್ನಡ ವೃತ್ತಿ ರಂಗಭೂಮಿ ಮತ್ತು ಚಲನ ಚಿತ್ರರಂಗ, ಬೆಂಗಳೂರು: ಜೆ.ಎಂ. ಎಂಟರ್ ಪ್ರೈಸಸ್.
3. ಮರುಳ ಸಿದ್ದಪ್ಪ ಕೆ., (2018), ಆಧುನಿಕ ಕನ್ನಡ ನಾಟಕ, ಬೆಂಗಳೂರು: ಸ್ವಪ್ನ ಬುಕ್ ಹೌಸ್.
4. ಶಿವಗಂಗಾ ಯು. ಬಿಲಗುಂದಿ, (2018), ಕನ್ನಡ ರಂಗಭೂಮಿಯ ಪರಂಪರೆ–ಪ್ರವೇಶಿಕೆ, ಬೆಂಗಳೂರು (ನೆಲಮಂಗಲ): ಶ್ರೀ ಅನ್ನಪೂರ್ಣ ಪಬ್ಲಿಷರ್ಸ್ ಅಂಡ್ ಡಿಸ್ಟ್ರಿಬ್ಯೂಟರ್ಸ್.
5. ಅಕ್ಷರ ಕೆ. ವಿ., (2009), ರಂಗಭೂಮಿಯ ಮುಖಾಂತರ, ಹೆಗ್ಗೋಡು: ಅಕ್ಷರ ಪ್ರಕಾಶನ.
6. ರಂಗನಾಥ ಎಚ್. ಕೆ., (2024), ಕರ್ನಾಟಕ ರಂಗಭೂಮಿ, ಬೆಂಗಳೂರು: ಹೇಮಂತ ಸಾಹಿತ್ಯ.